ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು.—ವಿಭಜಿಸಿದಾಗ ಫಲಿತಾಂಶ ಹೀಗಿದೆ.

೧. ಹೌದು — ೩೦

೨. ಇಲ್ಲ — ೧೫

ಸೂಚನೆಯು ''ಹೌದು'' ಎನ್ನುವುದರ ಪರವಾಗಿದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

2ನೇ ಖಂಡ :—

ಅಧ್ಯಕ್ಷರು.—ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ದೀರ್ಘ ಶೀರ್ಷಿ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ,

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಮೊದಲ ಖಂಡ ದೀರ್ಘ ಶೀರ್ಷಿ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೮ನೇ ಇಸವಿ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೮ನೇ ಇಸವಿ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.,,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ ಇದು ಬಹಳ ಸರಳವಾದ ತಿದ್ದುಪಡಿ ಇದು ಮುನಿಸಿಪಲ್ ಕೋರ್ಟ್ ಪೆಕ್ಯುನಿಯರಿ ಜ್ಯುರಿಸ್‌ಡಿಕ್ಷನ್ ಬಹಳ ವರ್ಷಗಳ ಹಿಂದೆ ೧೦ ಸಾವಿರ ಎಂದು ನಿಗದಿ ಮಾಡಲಾಗಿತ್ತು. ಈಗಿನ ಭೂಮಿಯ ಬೆಲೆ ಮತ್ತು ರೂಪಾಯಿ ಬೆಲೆ ಅವುಗಳ ಮೌಲ್ಯದಲ್ಲಿ ಬಹಳ ಬದಲಾವಣೆ ಆಗಿರುವುದರಿಂದ ಈ ಕೋರ್ಟ್ ಪೆಕ್ಯುನಿಯರಿ ಜ್ಯುರಿಸ್‌ಡಿಕ್ಷನ್ ಅನ್ನು ಹೆಚ್ಚು ಮಾಡತಕ್ಕ ತಿದ್ದುಪಡಿಯನ್ನು ಇದರಲ್ಲಿ ಸೇರಿಸಿದೆ. ಆ ಬಗ್ಗೆ ಎಲ್ಲಾ ಕಡೆಯಿಂದ ಮನವಿಗಳು ಬಂದಿವೆ. ವಕೀಲರುಗಳಿಂದ, ಸಾರ್ವಜನಿಕರಿಂದ ಹಾಗೂ ಕಕ್ಷಿದಾರರಿಂದ ಮನವಿಗಳು ಬಂದಿವೆ. ಇದರಿಂದ ಮುನ್ಸೀಫ್ ಕೋರ್ಟ್‌ಗಳಿಗೆ ಹೆಚ್ಚಿನ ಜವಾಬ್ದಾರಿ ಸಿಗುತ್ತದೆ ಮತ್ತು ಅದೇ ಕ್ಷೇತ್ರದಲ್ಲಿ ಆಯಾ ಪ್ರದೇಶಗಳಲ್ಲಿರತಕ್ಕ ಕಕ್ಷಿದಾರರು ಜಿಲ್ಲಾವಟ್ಟಕ್ಕೆ ಹೋಗತಕ್ಕ ಕಷ್ಟ ತಪ್ಪಿ ತಮ್ಮ ಕ್ಷೇತ್ರದ ಹತ್ತಿರದಲ್ಲಿರತಕ್ಕ ಕೋರ್ಟ್‌ನಲ್ಲಿ ನ್ಯಾಯ ತೀರ್ಮಾನ ಪಡೆದುಕೊಳ್ಳುವದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದು ಆತ್ಯಾವಶ್ಯಕವಾಗಿದೆ. ಇದನ್ನು ಮಾನ್ಯ ಸಭೆಯು ಮಂಜೂರು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ತಿದ್ದುಪಡಿಯನ್ನು ತಂದಿರುವ ಉದ್ದೇಶ ಒಳ್ಳೆಯದು ಇದೆ, ಮುನ್ಸೀಫ್ ಕೋರ್ಟ್‌ನಲ್ಲಿ ೧೦ ಸಾವಿರದಿಂದ ೫೦ ಸಾವಿರಕ್ಕೆ ಏರಿಸಿದ್ದೀರಿ. ಅದೇ ರೀತಿ ಸ್ಮಾಲ್‌ಕಾಸ್ ಕೋರ್ಟ್‌ನಲ್ಲಿ ೧೦ ಸಾವಿರದಿಂದ ೨೫ ಸಾವಿರಕ್ಕೆ ಏರಿಸಿದ್ದೀರಿ. ಡಿಸ್ಟ್ರಿಕ್ಟ್ ಕೋರ್ಟ್‌ಗಳಲ್ಲಿ ೨೦ ಸಾವಿರದಿಂದ ೧ ಲಕ್ಷಕ್ಕೆ ಏರಿಸಿದ್ದೀರಿ. ನಮ್ಮ ಮುಂದಿರುವ ಒಂದು ಪ್ರಶ್ನೆ ಏನೆಂದರೆ ಅನೇಕ ಕೇಸುಗಳು ಪೆಂಡಿಂಗ್ ಇವೆ. ಮುನ್ಸೀಫ್ ಕೋರ್ಟ್, ಸ್ಮಾಲ್‌ಕಾಸ್ ಕೋರ್ಟ್ ಡಿಸ್ಟ್ರಿಕ್ಟ್ ಕೋರ್ಟ್‌ಗಳಲ್ಲಿ ಕೇಸುಗಳಿವೆ. ಅವುಗಳ ವರ್ಗಾವಣೆಯನ್ನು ಯಾಪರೀತಿ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಬಿಲ್ಲಿನ ಸೆಕ್ಷನ್ ೪ನ್ನು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೋರ್ಟ್ ಫೀ ತೊಂದರೆಯಾಗುತ್ತದೆ ಈ ತರಹ ಕೆಲವು ಸಂಶಯಗಳಿವೆ ಅವುಗಳಿಗೆ ವಿವರಣೆ ಕೊಟ್ಟರೆ ಒಳ್ಳೆಯದೆಂದು ಕೇಳುತ್ತೇನೆ.

SRI A. LAKSHMISAGAR —In Section 4 it is said

"4. Transfer of Suits and Appeals.-(1) Notwithstanding anything contained in the Karnataka Act 11 of 1964 Karnataka Act 21 of 1964 or in any other law or provisions having the force of law.-

(a) all suits pending on the date of publication of a notification under the provision to sub-section (2) of section 8 of the Karnataka Small Cause Courts Act, 1964.....

ಇಲ್ಲದಿದ್ದರೆ ಕಕ್ಷಿದಾರರಿಗೆ ಅನ್ಯಾಯವಾಗುತ್ತದೆ, ಈಗ ಯಾವುದೇ ತೊಂದರೆಯಿಲ್ಲ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೫ನೇ ಇಸವಿಯ ಕರ್ನಾಟಕಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಂಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಂಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೪ರವರೆಗೆ

ಅಧ್ಯಕ್ಷರು.—"ಖಂಡ ೨ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಂಕದ ಅಂಗವಾಗಿರಲಿ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೨ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಂಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ:

ಅಧ್ಯಕ್ಷರು,—ಪ್ರಸ್ತಾವ ಏನೆಂದರೆ '' ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು,

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ''ಅಧ್ಯಕ್ಷರೆ ೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಕವನ್ನು'' ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಕ''ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

1988ನೇ ಇಸವಿಯ ಕರ್ನಾಟಕ ಕುಷ್ಠರೋಗ ಶಾಸನಗಳ (ನಿರಸನ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) —ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು) ಅವರ ಪರವಾಗಿ ೧೯೮೮ನೇ ಇಸವಿಯ ಕರ್ನಾಟಕ ಕುಷ್ಠರೋಗ ಶಾಸನಗಳ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ,

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಈ ಕುಷ್ಠರೋಗ ಎನ್ನುವುದು ಈಗ ಕ್ಯೂರಬಲ್ ಡಿಸೀಸ್ ಎಂದು ಸಾಬೀತಾಗಿದೆ. ಈಗ ಇರತಕ್ಕಂಥ ಕಾನೂನು ಪ್ರಕಾರ ಕುಷ್ಠರೋಗಿಗಳನ್ನು ಬೇರೆ ಕಡೆ ಇಡಬೇಕು ಸಮಾಜದ ಇತರೆ ಜನರ ಜೊತೆಯಲ್ಲಿ ಬೆರೆಯದೇ ಇರತಕ್ಕಂಥ ರೀತಿಯಲ್ಲಿ ಕಾನೂನು ಇದೆ. ಈಗ ಕುಷ್ಠರೋಗ ಬೇರೆ ಖಾಹಿಲೆಗಳ ಹಾಗೆ ವಾಸಿಯಾಗುವುದರಿಂದ ಅವರನ್ನು ಪ್ರತ್ಯೇಕವಾಗಿ ಇಡುವುದು ಬೇಡವೆಂದು ಈ ದಿಸೆಯಲ್ಲಿ ಕೆಲಸ ಮಾಡತಕ್ಕಂಥ ಎಲ್ಲಾ ಸಂಘ ಸಂಸ್ಥೆಗಳು ಮನವಿಯನ್ನು ಕೊಟ್ಟಿದ್ದಾರೆ ಅದರ ಪ್ರಕಾರ ಈಗ ಇರುವ ಕಾನೂನನ್ನು ಜಾರಿಗೆ ಕೊಡದೇ ಇರುವ ರೀತಿಯಲ್ಲಿ ತೆಗೆದುಹಾಕತಕ್ಕದ್ದು ಇದೆ. ಇದಕ್ಕೆ ಮಾನ್ಯ ಸದಸ್ಯರು ಬೆಂಬಲ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೮ನೇ ಇಸವಿಯ ಕುಷ್ಠರೋಗ ಶಾಸನಗಳ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು